# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು – 572 103
ದೂರವಾಣಿ: 0816–2254546, 0816–2255596, 0816–2255597 ಫ್ಯಾಕ್ಸ್: 0816–2270719

ಸಂಖ್ಯೆ:ತು.ವಿ:ಸ್ನಾ.ಪ.ವಿ:ಖ.ಕೋ:2022–23/3353 ದಿನಾಂಕ: 26.09.2022

**ದರಪಟ್ಟಿ ಆಹ್ವಾನ (ವಿ.ವಿ ವೆಬ್ ಸೈಟ್ ಮುಖಾಂತರ)**

ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪರಿಸರವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ **"UV Visible Double Beans Spectrophotometer"** ಉಪಕರಣಗಳನ್ನು ಸರಬರಾಜು ಪಡೆಯಲು ದರಪಟ್ಟಿ ಆಹ್ವಾನಿಸುವ ಕುರಿತು.

ಉಲ್ಲೇಖ:
1. ಸಂಯೋಜಕರು, ಸ್ನಾತಕೋತ್ತರ ಪರಿಸರವಿಜ್ಞಾನ ಅಧ್ಯಯನ ಮತ್ತು ಸಂಶೋಧನ ವಿಭಾಗ, ತು.ವಿ.ತು ಇವರ ಮನವಿ ಪತ್ರ ದಿನಾಂಕ: 15.06.2022.
2. 21 ನೇ ಖರೀದಿ ಸಮಿತಿ ಸಭಾ ನಿರ್ಣಯ ದಿನಾಂಕ: 24.08.2022.
3. ವಿ.ವಿ ಅಧಿಸೂಚನೆ ಪತ್ರದ ಸಂಖ್ಯೆ: ತುವಿತು:ಕೆ.ಟಿ.ಪಿ.ಪಿ/ತಿ.ಪ/ಖ.ಕೋ/2022–23/3095 ದಿನಾಂಕ: 09.09.2022.
4. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 20.09.2022(ಕಂಡಿಕೆ–63).

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (01) ರ ಮನವಿಯ ಮೇರೆಗೆ ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪರಿಸರವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ **"UV Visible Double Beans Spectrophotometer"** ಉಪಕರಣಗಳನ್ನು ಸರಬರಾಜು ಪಡೆಯಲು ಉಲ್ಲೇಖ (02) ಮತ್ತು (03) ರ ಅನ್ವಯ ಹಾಗೂ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಆಸಕ್ತ ನೋಂದಾಯಿತ ಸಂಸ್ಥೆಗಳಿಂದ ಈ ಕೆಳಕಂಡ ಕೋಷ್ಟಕದಲ್ಲಿ ವಿವರಿಸಿರುವಂತೆ ದರಪಟ್ಟಿಗಳನ್ನು ಆಹ್ವಾನಿಸಿದೆ.

| ಕ್ರ. ಸಂ. | ಉಪಕರಣಗಳ ಹೆಸರು ಮತ್ತು ಸಂರಚನೆ | ಪ್ರಮಾಣ | ದರ ಗಳನ್ನು ನಮೂದಿಸುವುದು. ತೆರಿಗೆ ಸೇರಿದಂತೆ (Price Per Unit) |
|---|---|---|---|
| 01 | **UV Visible Double Beam Spectrophotometer**<br><br>**PC Based Double Beam UV-Visible Spectrophotometer with 1nm bandwidth (190nm-1100nm) including Operating Software, but without PC and Printer.**<br>**OPTICS :**<br>Double beam optics with aberration corrected holographic concave grating with 1200 lines/mm blazed at 275nm based monochromator.<br>**WAVE LENGTH:**<br>Range-190 to 1100nm<br>Accuracy:±0.5nm<br>Repeatability: ±0.2nm<br>Resolution:0.1nm<br>Bandwidth:1.0nm<br>**PHOTOMETRIC:**<br>Range:±3.0Abs (Usable upto ±4.0Abs)<br>Accuracy: ±0.005 Abs at 1.0 Abs<br>Repeatability: ±0.002 Abs at 1.0 Abs<br>**STRAY LIGHT:**<br>Less than 0.05%T at 220nm and 340nm<br>**BASELINE CORRECTION:**<br>Automatic baseline correction<br>**BASELINE FLATNESS:**<br>Within 0.003Abs from 200 to 1100nm<br>(Excluding noises) after Baseline calibration.<br>**SCAN SPEED:**<br>Slow, Medium and Fast<br>**DATA INTERVAL:**<br>Depends on wavelength range and scan speed<br>**SAMPLE HOLDER:**<br>One fixed for reference and one for sample (10mm path length Cuvette)<br>**SOURCE:** | 01 | |

| | | | |
|---|---|---|---|
| | Tungsten halogen lamp (320 to 1100nm)<br>Deuterium lamp (192 to 340nm)<br>**DETECTOR:**<br>Two number UV enhancer wide range solid state Si-Photodiodes, one for reference and Second for sample<br>**OPERATING NODES:**<br>(i) Single wavelength<br>(ii)Multi wave length( Max. 15 wavelengths)<br>(iii) Scan (with multi scan facility)<br>(iv)Time/Kinetic Scan(with derivative facility)<br>**MEASURING MODES:**<br>1. Absorbance<br>2.% Transmittance<br>3.Concentration (K Factor, multi standard)<br>4.Muti-ComponentAnalysis:(Max10 components)<br>**AUTOMATIC CALIBRATION/OPTIMIZATIONS:(GLP/GMP):**<br>1. Base line calibration<br>2. Source optimization<br>3. wave length calibration<br>4.Electronic Calibration<br>5. Self-diagnosis<br>**DATA PROCESSING:**<br>1.Peak pick/point pick/valley pick<br>2.expansion/compression of spectra<br>3.1st ,2nd 3rd & 4th derivative<br>**DATA PRESENTATION**<br>Display of graphic and tabular data and computer monitor, permanent data storage on hard disc<br>**Accessories :**<br>Two matched 10 mm path length quartz cuvettes | | |

<u>ಷರತ್ತು ಮತ್ತು ನಿಬಂಧನೆಗಳು</u>

1. ಮುಚ್ಚಿದ ಲಕೋಟೆಯ ಮೇಲೆ **"Laboratory Equipments to DOSR in EVS (USC)"** ಸರಬರಾಜು ಮಾಡಲು ದರಪಟ್ಟಿ ಎಂದು ನಮೂದಿಸುವುದು.
2. ಈ ದರಪಟ್ಟಿಯು ಕೆ.ಟಿ.ಪಿ.ಪಿ ನಿಯಮ 4(i) (ii) ರ ತಿದ್ದುಪಡಿ ವಿಧೇಯಕದಂತೆ, ಅನ್ವಯಿಸಿರುತ್ತದೆ.
3. ತುಮಕೂರು ವಿಶ್ವವಿದ್ಯಾನಿಲಯವು DSIR ನೊಂದಾಣಿ ಪ್ರಮಾಣ ಪತ್ರವನ್ನು ಹೊಂದಿದ್ದು ಅದರಂತೆ ತೆರಿಗೆಯಲ್ಲಿ ವಿನಾಯಿತಿ ನೀಡಿ ದರಗಳನ್ನು ನಮೂದಿಸತಕ್ಕದ್ದು.
4. ದರಪಟ್ಟಿಯೊಂದಿಗೆ ತಮ್ಮ ಸಂಸ್ಥೆಯು ನೊಂದಾಣಿಯಾಗಿರುವ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.
5. ಸದರಿ ದರಪಟ್ಟಿಯು ಒಂದು ಲಕ್ಷ ಮೀರಿದ ಸಾಮಗ್ರಿಗಳು/ಸೇವೆಗಳಿಗೆ ಸಂಬಂಧಿಸಿರುವುದರಿಂದ ಸದರಿ ಸೇವೆಗೆ ಕೆ.ಟಿ.ಪಿ.ಪಿ ನಿಯಮಾನುಸಾರ ರೂ.5,382/- ಗಳ ಇ.ಎಂ.ಡಿ ಮೊತ್ತವಾಗಿ **Banker's guarantee / Demand Draft / Pay Order/FDR in favor of "Finance Officer, Tumkur University" payable at Tumakuru** ಇವರಿಗೆ ದರಪಟ್ಟಿಯೊಂದಿಗೆ ಸಲ್ಲಿಸತಕ್ಕದ್ದು.
6. ದರಪಟ್ಟಿಯ ಜೊತೆಗೆ ಇತರೆ ಸರ್ಕಾರಿ ಇಲಾಖೆಗಳಿಗೆ ಸರಬರಾಜಿನ ಸಂಬಂಧದ ಕಾರ್ಯಾದೇಶಗಳು ಮತ್ತು ಸೇವಾ ತೃಪ್ತಿದಾಯಕ ಪ್ರಮಾಣ ಪತ್ರಗಳನ್ನು (Performance/Satisfactory Certficate) ಕಡ್ಡಾಯವಾಗಿ ಲಗತ್ತಿಸತಕ್ಕದ್ದು.
7. ದರಪಟ್ಟಿಗಳನ್ನು ಕುಲಸಚಿವರು, ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್.ರಸ್ತೆ ತುಮಕೂರು-572 103, ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಕ್ಕೆ ವಿಶ್ವವಿದ್ಯಾನಿಲಯವು ಜವಾಬ್ದಾರರಾಗುವುದಿಲ್ಲ.
8. ದರಪಟ್ಟಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 11.10.2022 ಅಪರಾಹ್ನ 03.00 ಗಂಟೆ.
9. ದರಪಟ್ಟಿಯನ್ನು ದಿನಾಂಕ: 12.10.2022 ರಂದು ಅಪರಾಹ್ನ 12.00 ಕ್ಕೆ ತೆರೆಯಲಾಗುವುದು.
10. ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ಕಡ್ಡಾಯವಾಗಿ ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
11. ದರಪಟ್ಟಿಯಲ್ಲಿ ನಮೂದಿಸಿದ ದರಗಳು ತೆರಿಗೆ ಮತ್ತು ಸೇವೆ ವೆಚ್ಚವನ್ನು ಒಳಗೊಂಡಿರತಕ್ಕದ್ದು.
12. ದರಪಟ್ಟಿಯ ಅವಧಿಯು ದರಪಟ್ಟಿಯನ್ನು ತೆರೆದ ದಿನಾಂಕದಿಂದ 60 ದಿನಗಳ ಅವಧಿಯವರೆಗೆ ಚಾಲ್ತಿಯಲ್ಲಿರಬೇಕು.
13. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ಅಧಿಕೃತ ಮಾರಾಟಗಾರರು/ಸರಬರಾಜುದಾರರು/ತಯಾರಕರು ಆಗಿದ್ದಲ್ಲಿ ದಾಖಲೆಗಳನ್ನು ಲಗತ್ತಿಸುವುದು.

14. ಸರಬರಾಜು ಮಾಡಿದ 30 ದಿನಗಳೊಳಗೆ ಹುಂಡಿಯನ್ನು ಪಾವತಿಸಲಾಗುವುದು.
15. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
16. ವಿಶ್ವವಿದ್ಯಾನಿಲಯವು ಒಂದು ವೇಳೆ ತಮ್ಮ ದರಪಟ್ಟಿಯನ್ನು ತಾತ್ಕಾಲಿಕವಾಗಿ ಅಂಗೀಕರಿಸಿದ್ದಲ್ಲಿ ಮಾದರಿ ಉಪಕರಣಗಳನ್ನು ವಿಶ್ವವಿದ್ಯಾನಿಲಯವು ಸೂಚಿಸುವಂತಹ ವಿಭಾಗಕ್ಕೆ ಸಲ್ಲಿಸಿ ಪ್ರಚುರಪಡಿಸತಕ್ಕದ್ದು
17. ತಮ್ಮ ದರಪಟ್ಟಿಯಲ್ಲಿ ಪ್ರತಿ ಸಾಮಗ್ರಿವಾರು ದರಗಳನ್ನು ನಮೂದಿಸುವುದು. (ಎಲ್ಲಾ ತೆರಿಗೆ ಮತ್ತು ಸರಬರಾಜು ವೆಚ್ಚ ಒಳಗೊಂಡಿರತಕ್ಕದ್ದು.)
18. ತಮ್ಮ ಸಂಸ್ಥೆಯು ಸರಬರಾಜು ಮಾಡಲು ಉದ್ದೇಶಿಸಿರುವ ಪ್ರಯೋಗಾಲಯದ ಉಪಕರಣಗಳ ಸಂರಚನೆಗಳಲ್ಲಿ ವ್ಯತ್ಯಾಸ ಇದ್ದರೆ ಸಂರಚನೆಗಳ ಮಾಹಿತಿ/ಮಾದರಿ ಸಂಖ್ಯೆಗಳನ್ನು ದರಪಟ್ಟಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.
19. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
20. ಸಂಸ್ಥೆಯ ಯಾವುದೇ ಷರತ್ತುಬದ್ಧ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.
21. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
22. ವಿಶ್ವವಿದ್ಯಾನಿಲಯವು ಕಾರ್ಯಾದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
23. ಹೆಚ್ಚಿನ ವಿವರಗಳು ಅಥವಾ ಮಾಹಿತಿಯ ಅಗತ್ಯವಿದ್ದಲ್ಲಿ ಸಂಯೋಜಕರು, ಸ್ನಾತಕೋತ್ತರ ಪರಿಸರ ವಿಜ್ಞಾನ, ಅಧ್ಯಯನ ಮತ್ತು ಸಂಶೋಧನಾ ವಿಭಾಗ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರನ್ನು ಸಂಪರ್ಕಿಸಬಹುದು.

ಆದೇಶದ ಮೇರೆಗೆ,

D. Suresh 26/09/2022

ಉಪಕುಲಸಚಿವರು
(ಸಾಮಾನ್ಯ ವಿಭಾಗ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಪ್ರತಿಗಳು:

1. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಂ ಅನಾಲಿಸಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ)
3. ಸಂಯೋಜಕರು, ಸ್ನಾತಕೋತ್ತರ ಪರಿಸರವಿಜ್ಞಾನ ಅಧ್ಯಯನ & ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ತುಮಕೂರು ವಿಶ್ವವಿದ್ಯಾನಿಲಯದ ಸೂಚನಾ ಫಲಕ.
5. ಕಚೇರಿ ಪ್ರತಿ.